# ಪಾತ್ರ ಕಣ್ಣೀರು ಸುರಿಸೋದಕ್ಕಲ್ಲ

## ಸ್ಪಂದನಾ ಉದಯದ 'ನಾನು ನನ್ನ ಕನಸು'ನ ಅನು

◆ **ಅಪ್ಪ ಬಿಟ್ಟು ಹೋದ ಕನಸನ್ನು ಅನು ಎತ್ತಿ ಹಿಡಿಯುತ್ತಾಳಾ?**

ಅಪ್ಪನ ಕನಸನ್ನು ಸಾಕಾರಗೊಳಿಸುವ ಸವಾಲು ಆಕೆಯ ಮೇಲಿದೆ. ಸದ್ಯ ಅನುಗೆ ತಂದೆಯ ಕನಸುಬಿಟ್ಟರೆ ಬೇರೆ ಏನೂ ಇಲ್ಲ. ಅಕಾಲಿಕ ತಂದೆಯ ಅಗಲಿಕೆಯಲ್ಲಿ ಸೋದರ ಮಾವನ ಆಶ್ರಯದಲ್ಲಿ ಬೆಳೆಯುತ್ತಿದ್ದಾಳೆ. ತುಂಬ ಕಷ್ಟದಲ್ಲಿ ಇರುವ ಹುಡುಗಿ. ಬಡತನವಾಗಲಿ, ಇರಬಹುದಾದ ಹಲವು ಸಮಸ್ಯೆಗಳಾಗಲಿ ಆಕೆಯ ಗುರಿ ಸಾಧನೆಗೆ ತೊಂದರೆಯಾಗಿಲ್ಲ. ಎಲ್ಲರಿಗೂ ಒಳಿತನ್ನೇ ಮಾಡಬೇಕು ಎಂದು ಬಯಸುವ ಆಕೆಗೆ ಹಣಕಾಸಿನ ಸಮಸ್ಯೆ ಸೇರಿದಂತೆ ತನ್ನ ಮಾವನಿಂದಲೂ ಕಿರಿಕಿರಿ ಅನುಭವಿಸುತ್ತಿದ್ದಾಳೆ. ಆದರೆ ಅಪ್ಪನ ಕನಸನ್ನು ಈಡೇರಿಸುವ ಸಂಕಲ್ಪವನ್ನು ಹೊತ್ತಿರುತ್ತಾಳೆ. ಎಷ್ಟೇ ಕಷ್ಟ ಇದ್ದರೂ ಆ ಬಗ್ಗೆ ತಲೆಕಡೆಸಿಕೊಳ್ಳದೆ, ತನ್ನ ಆತ್ಮವಿಶ್ವಾಸವನ್ನು ಕುಂದಿಸಿಕೊಳ್ಳದೆ ಮುನ್ನುಗ್ಗುವ ಹುಡುಗಿ. ಅವಳು ಡಾಕ್ಟರ್ ಆಗೆ ಆಗ್ತಾಳೆ.

◆ **ಪಾತ್ರವನ್ನು ನೀವು ಹೇಗೆ ಗಿಟ್ಟಿಸಿದ್ದು...**

ಇದು ನನ್ನ ಮೊದಲ ಧಾರಾವಾಹಿ. ಆಡಿಷನ್ ಮೂಲಕ ನನಗೆ ಇದು ಸಿಕ್ಕಿತು. ಎಂಜಿನಿಯರಿಂಗ್ ಓದುವಾಗಲೇ ನಟನೆ ಬಗ್ಗೆ ಒಲವು ಮೂಡಿತ್ತು. ಸಾಮಾಜಿಕ ಮಾಧ್ಯಮದಲ್ಲಿ ಒಂದಾದ ಇನ್‌ಸ್ಟಾಗ್ರಾಮ್ ನೋಡಿ ಪ್ರಯತ್ನವನ್ನು ಆರಂಭಿಸಿದೆ. ಮೊದಲು ಆಡಿಷನ್‌ಗೆ ಅಹ್ವಾನ ಬಂದಾಗ ವಿಶ್ವಾಸ ಮೂಡಲಿಲ್ಲ. ಕಾರಣ ಈ ಕ್ಷೇತ್ರ ನನಗೆ ತೀರಾ ಹೊಸತು. ಮೇಲಾಗಿ ನಾವು ಇದ್ದಿದ್ದು ಮೈಸೂರು. ಅಲ್ಲಿಂದ ಅಮ್ಮನನ್ನು ಕರೆದುಕೊಂಡು ಬರಬೇಕಿತ್ತು. ಹೇಗೋ ನೋಡಿ ಬರೋಣ ಅಂದರೂ ಸ್ವಲ್ಪ ತೊಂದರೆ ಆಗುತ್ತಿತ್ತು. ಇಂತಹ ಸ್ಥಿತಿಯಲ್ಲೂ ಮೊದಲ ಒಂದಕ್ಕೆ ಆಡಿಷನ್ ಕೊಟ್ಟೆ. ಅವಕಾಶ ದೊರೆತದ್ದನ್ನೂ ನಂಬಲು ಆಗಲಿಲ್ಲ. ನನ್ನ ಪದವಿಯನ್ನು ಪೂರ್ಣಗೊಳಿಸಿದ ನಂತರ ಅಭಿನಯದಲ್ಲಿ ಮುಂದುವರಿಯೋಣ ಎಂದು ನನಗೆ ನಾನೇ ನಿರ್ಬಂಧ ಹಾಕಿ ಅಷ್ಟಕ್ಕೆ ನಿಲ್ಲಿಸಿದೆ. ಅಭಿನಯ ಮನದಾಳದಲ್ಲಿ ಬೇರೂರಿ ನಿಂತಿದ್ದರಿಂದ ಆ ಪ್ರಯತ್ನವನ್ನು ಮುಂದುವರಿಸಿದೆ. 'ನಟನಾ' ರಂಗ ತಂಡದಲ್ಲಿ ಹದಿನೈದು ದಿನಗಳ ನಟನೆ ಕುರಿತ ಕಾರ್ಯಾಗಾರದಲ್ಲಿಯೂ ಭಾಗವಹಿಸಿದ್ದೆ. ಸಾಮಾಜಿಕ ಮಾಧ್ಯಮದಲ್ಲಿ ಆಡಿಷನ್‌ಗಳ ವಿಷಯ ಗೊತ್ತಾಗುತ್ತಿತ್ತು. 'ನಾನು ನನ್ನ ಕನಸು'ಗೆ ಸಂಪರ್ಕಿಸಿದೆ ಒಂದು ವಿಡಿಯೊ ಕಳುಹಿಸಲು ಹೇಳಿದರು. ನಂತರ ಆಡಿಷನ್ ನೀಡಿದೆ. ಅವಕಾಶವೂ ಸಿಕ್ತು, ಇಷ್ಟ ಆಯ್ತು ನಟಿಸುತ್ತಿದ್ದೇನೆ.



◆ **ಸ್ಪಂದನಾ ಆಗಿ ನಿಮ್ಮ ಕನಸುಗಳು ಏನಾಗಿದ್ದವು?**

ಮೊದಲಿನಿಂದಲೂ ವೇದಿಕೆಯ ಚಟುವಟಿಕೆ ನನಗೆ ಆಕರ್ಷಣೀಯ. ಶಾಲೆ–ಕಾಲೇಜುಗಳಲ್ಲಿ ನಾಟಕ, ನೃತ್ಯ ಎಂದು ಮುಂದಿರುತ್ತಿದ್ದೆ. ಜೊತೆಗೆ ಮೈಸೂರು ದಸರಾದಲ್ಲಿ ಮಾಡೆಲಿಂಗ್ ಮಾಡುತ್ತಿದ್ದೆ. ಮಾತ್ರವಲ್ಲ ಅನೇಕ ಜಾಹೀರಾತುಗಳಿಗೆ ರೂಪದರ್ಶಿಯಾಗಿದ್ದೇನೆ. ಅಂತೆಯೇ ಅನೇಕ ಶೋಗಳನ್ನೂ ನೀಡಿದ್ದೇನೆ. ಎಂಜಿನಿಯರ್ ಆಗಬೇಕು ಎಂದು ಪದವಿಗೆ ಸೇರಿದೆ. ಇದು ಇಲ್ಲದಿದ್ದರೆ ಎಂಜಿನಿಯರ್ ಆಗಿಯೇ ಕೆಲಸ ಮಾಡ್ತಾ ಇದ್ದೆ. ಬಾಲ್ಯದ ಹವ್ಯಾಸ ವೃತ್ತಿಯಾಗಿ ಒಲಿದಿದೆ ಇದನ್ನು ಮುಂದುವರಿಸಬೇಕು ಎಂದುಕೊಂಡಿದ್ದೇನೆ.

◆ **ನಟನೆ ಹೊರತಾಗಿ ಏನಾದರೂ ಯೋಚನೆ ಇದೆಯಾ?**

ನನ್ನ ಕಾಲೇಜು ದಿನಗಳಲ್ಲಿಯೇ ಶಾಲೆಗಳಿಗೆ ಹೋಗಿ ಮಕ್ಕಳಿಗೆ ಪಾಠ ಮಾಡ್ತಾ ಇದ್ದೆ. ಅಭಿನಯದ ಜೊತೆಗೆ ಅದನ್ನು ಮಾಡಬಹುದು ಎಂದುಕೊಂಡಿದ್ದೇನೆ. ಮಕ್ಕಳಿಗೆ ಪಾಠಮಾಡಬೇಕು ಎನ್ನುವುದು ಇಷ್ಟದ ಕೆಲಸ. ಬಣ್ಣದ ಲೋಕಕ್ಕೆ ಈಗಷ್ಟೇ ಪ್ರವೇಶ ಮಾಡ್ತಿದ್ದೇನೆ. ಪರ್ಫಾರ್ಮೆನ್ಸ್‌ನ ಕಷ್ಟ–ಸುಖ ಏನು ಎನ್ನುವುದು ಗೊತ್ತಾಗುತ್ತಿದೆ.

ಅಭಿನಯದ ಬಗ್ಗೆ ಹೇಳುವುದಾದರೆ ಬೆಳಿಗ್ಗೆ ಸ್ಕ್ರಿಪ್ಟ್ ಕೊಡ್ತಾರೆ. ಓದುತ್ತೇನೆ, ಕೆಲವೊಂದು ಸನ್ನಿವೇಶ ಗೊತ್ತಾಗಲ್ಲ ಅದನ್ನು ನಿರ್ದೇಶಕರ ಹತ್ತಿರ ಕೇಳ್ತೀನಿ. ನಮ್ಮಲ್ಲಿ ಅನುಭವಿ ನಟರಿದ್ದಾರೆ. ಅವರ ಸೀನ್‌ಗಳನ್ನು ನೋಡುತ್ತೇನೆ. ಕೇಳಿ ಕಲಿಯುವುದಕ್ಕಿಂತ, ನೋಡಿ ಕಲಿಯುವುದು ಹೆಚ್ಚು ಪ್ರಯೋಜನವಾಗುತ್ತದೆ. ಎಲ್ಲ ಸೀನ್‌ಗಳನ್ನು ನೋಡ್ತಾ ಇರುತ್ತೇನೆ. ನೋಡಿ ನೋಡಿ ಅಭಿನಯವನ್ನು ನನ್ನದಾಗಿಸಿಕೊಳ್ಳುತ್ತಿದ್ದೇನೆ. ಆರಂಭದ ಕೆಲವು ದಿನಗಳ ಕಾಲ ಕ್ಯಾಮೆರಾ ನೋಡ್ತಾ ಇದ್ದೆ. ಅದು ಹೆಚ್ಚು ಕೃತಕ ಅನ್ನಿಸ್ತಾ ಇತ್ತು. ಈಗ ಅದನ್ನು ಹತೋಟಿಗೆ ತೆಗೆದುಕೊಂಡಿದ್ದೇನೆ. ಮೊದಲಿನಿಂದಲೂ ಸಿನಿಮಾಗಳ ಬಗ್ಗೆ ಒಲವು ಹೆಚ್ಚಿದೆ. ನಾನೂ ತುಂಬ ಸಿನಿಮಾ ನೋಡುತ್ತೇನೆ. ಸಿನಿಮಾದಲ್ಲಿಯೂ ಅವಕಾಶ ಸಿಕ್ಕರೆ ನಟಿಸುತ್ತೇನೆ. ನಾಯಕಿಯೇ ಆಗಬೇಕು ಎನ್ನುವ ಕಲ್ಪನೆ ಇಲ್ಲ. ಕಲಾಭಿವ್ಯಕ್ತಿಗೆ ಅವಕಾಶ ಇರುವಂತಹ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು. ಯಾವುದೋ ಒಂದಕ್ಕೆ ಪಾತ್ರ ಕಟ್ಟಿ ಹಾಕುವಂತೆ ಇರಬಾರದು. ಧಾರಾವಾಹಿಯಲ್ಲೂ ಕೂಡ ಅಳುಮುಂಜಿಗಿಂತ ಸವಾಲನ್ನು ಎದುರಿಸುವ ಪಾತ್ರಗಳು ಇಷ್ಟ.

■ **ರಾಘವೇಂದ್ರ ಕೆ.**